Sl. No.	District	Progressive Achievement from 1-4-2000 to 31-1-2001	
		Gross	Net
20.	Dharwad	12201.05	5217.04
21.	Haveri	2937.71	1214.85
22.	Gadag	3516.91	1664.55
23.	Gulbarga	18323.34	3383.37
24.	Bidar	3410.10	1732.82
25.	Raichur	4322.77	1678.24
26.	Koppal	882.44	801.81
27.	Bellary	6080.44	2186.95
	Total	**275102.20**	**118641.71**

ಮುಜರಾಯಿ ಇಲಾಖೆಯಿಂದ ಗುಲ್ಬರ್ಗಾ ಜಿಲ್ಲೆಗೆ ಹಣ ಬಿಡುಗಡೆ:

21 (8) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಜೇವರ್ಗಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 2000-01ನೇ ಸಾಲಿನಲ್ಲಿ ರಾಜ್ಯದ ಮುಜರಾಯಿ ಇಲಾಖೆಗೆ ನಿಗದಿಪಡಿಸಿರುವ ಹಣವೆಷ್ಟು;

2) ಈ ಹಣದಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟು ಮಂಜೂರಿಯಾಗಿ ಬಿಡುಗಡೆ ಮಾಡಲಾಗಿದೆ;

3) ಅದರಲ್ಲಿ ಗುಲ್ಬರ್ಗಾ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣ ಮಂಜೂರಿ ಮಾಡಿ ಬಿಡುಗಡೆ ಮಾಡಲಾಗಿದೆ;

4) ಗುಲ್ಬರ್ಗಾ ಜಿಲ್ಲೆಯಲ್ಲಿ ಮಂಜೂರಿಯಾಗಿರುವ ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು; ತಾಲ್ಲೂಕುವಾರು/ದೇವಸ್ಥಾನವಾರು ವಿವರ ನೀಡುವುದು?

ಶ್ರೀ ಬಾಬುರಾವ್ ಬಸವಣ್ಣ ಚಿಂಚನೂರು (ಮುಜರಾಯಿ ರಾಜ್ಯ ಸಚಿವರು)

1) ಸರ್ಕಾರವು ಮುಜರಾಯಿ ಇಲಾಖೆಗೆ 2000-01ನೇ ಸಾಲಿನಲ್ಲಿ ಒದಗಿಸಿರುವ ಹಣದ ವಿವರ ಕೆಳಕಂಡಂತಿದೆ.

ಅ) ದುರಸ್ತಿ: ಜೀರ್ಣೋದ್ಧಾರ ರೂ. 1.26 ಕೋಟಿ

ಆ) ಹೊಸ ನಿರ್ಮಾಣ ರೂ. 1.50 ಕೋಟಿ

ಇ) ಆರಾಧನಾ ಯೋಜನೆ ರೂ. 5.00 ಕೋಟಿ

2) ಸರ್ಕಾರವು ಜಿಲ್ಲೆಗಳಿಗೆ ನಿರ್ದಿಷ್ಟವಾಗಿ ಹಣ ಹಂಚಿಕೆ ಮಾಡುವುದಿಲ್ಲ. ಜಿಲ್ಲೆಗಳಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹಣದ ಲಭ್ಯತೆಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುವುದು. 2000-01ನೇ ಸಾಲಿನಲ್ಲಿ ಹಣವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲ.

3) 2000-01ನೇ ಸಾಲಿನ ಹಣವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲ.

4) 2000-01ನೇ ಸಾಲಿನಲ್ಲಿ ಅನುದಾನವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೆ.ಆರ್. ನಗರ ತಾಲ್ಲೂಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಟ್ಟೇಪುರ ಅಣೆಕಟ್ಟು:

25 (266) ಶ್ರೀ ಹೆಚ್.ಪಿ. ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕೆ.ಆರ್. ನಗರ ತಾಲ್ಲೂಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಟ್ಟೇಪುರ ಅಣೆಕಟ್ಟು ಬಲದಂಡೆ ನಾಲೆ (52 ಮೈಲಿ) 83 ಕಿ.ಮೀ. ದೂರ ಇದ್ದು, ಕಡೆಯಲ್ಲಿರುವ ಅಚ್ಚುಕಟ್ಟುದಾರರಿಗೆ ನೀರು ತಲುಪದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಈ ನಾಲೆಯ ಆಧುನೀಕರಣ ಹಾಗೂ ಹೂಳು ಎತ್ತುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ ಎಷ್ಟು ಹಣ ಮಂಜೂರು ಮಾಡಲಾಗುವುದು; ಈ ಕಾರ್ಯವನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

1) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

2) ಇದೆ, ಸದರಿ ಕಾಮಗಾರಿಗೆ 14.64 ಕೋಟಿ ರೂ. ಮೊತ್ತದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಪಿರಿಯಾ ಪಟ್ಟಣ ಏತ ನೀರಾವರಿ ಯೋಜನೆ:

26 (267) ಶ್ರೀ ಹೆಚ್.ಪಿ. ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಗೆ ಒಟ್ಟು ತಗಲುವ ಹಣ ಎಷ್ಟು; ಮತ್ತು ಇದುವರೆವಿಗೂ ಪ್ರಾರಂಭದಿಂದ ಖರ್ಚಾಗಿರುವ ಹಣವನ್ನು ವರ್ಷವಾರು ವಿವರ ನೀಡುವುದು;

2) ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು;

3) ಈ ಯೋಜನೆಗೆ ಕೇವಲ ತುರ್ತಾಗಿ ರೂ. 20 ಕೋಟಿ ಹಣ ಒದಗಿಸಿದರೆ ಒಂದು ವರ್ಷದ ಒಳಗೆ 25ನೇ ಕಿ.ಮೀ. ವರೆಗೆ ಕೆಲಸ ಪೂರ್ತಿಯಾಗಿ 25 ಸಾವಿರ ಎಕರೆಗೆ ನೀರು ಒದಗಿಸಲು ಸಾಧ್ಯ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;